ಶ್ರೀ ಬಿ ಎಸ್ ಪಾಟೀಲ್(ಸಾಸನೂರ) ಮತ್ತು ಶ್ರೀ ಟಿ ಜಾನ್‌ರವರನ್ನು ಪರಿಚಯ ಮಾಡುತ್ತೇನೆ ಇನ್ನೂ ಇಬ್ಬರು ಮಂತ್ರಿಗಳು ಸಭೆಗ ಬಂದ ಮೇಲೆ ಪರಿಚಯ ಮಾಡಿಸುತ್ತೇನೆ

(ಈ ಹಂತದಲ್ಲಿ ಶ್ರೀ ಬಿ ಎಸ್ ಪಾಟೀಲ್(ಸಾಸನೂರ) ಹಾಗೂ ಶ್ರೀಟಿ ಜಾನ್‌ರವರು ಸದನದಲ್ಲಿ ಎದ್ದು ನಿಂತು ನಮಸ್ಕರಿಸಿದರು)

ಅಧ್ಯಕ್ಷರು ಆಯಿತು, ಆ ಇಬ್ಬರೂ ಮಂತ್ರಿಗಳು ಸಭಗ ಒಂದ ಮೇಲೆ ಪರಿಚಯ ಮಾಡಿಸಿಕೊಡಿ, ಈಗ ಪ್ರಶ್ನೋತ್ತರವನ್ನು ಪ್ರಾರಂಭ ಮಾಡೋಣ

## 4) ಪ್ರಶ್ನೋತ್ತರಗಳು

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು**

ತರೀಕೆರೆ ಪಟ್ಟಣ ಪಂಚಾಯ್ತಿಯನ್ನು ಮೇಲ್ದರ್ಜೆಗೇರಿಸುವುದು

ಚುಕ್ಕೆ ಗುರುತಿನ ಪ್ರಶ್ನೆ ನಂಬ್ಕೆ 1(423)

**ಸದಸ್ಯರ ಹೆಸರು ಶ್ರೀ ನೀಲಕಂಠಪ್ಪ ಬಿ ಆರ್(ತರೀಕೆರೆ)**

**ಉತ್ತರಿಸುವ ಸಚಿವರು ಶ್ರೀ ಮಲ್ಲಿಕಾರ್ಜುನ ನಾಗಪ್ಪ ಎಂ(ಪೌರಾಡಳಿತ ರಾಜ್ಯ ಸಚಿವರು)**

### ಪ್ರಶ್ನೆ

ಅ) ಚಿಕ್ಕಮಗಳೂರು ಜಿಲ್ಲೆ ತರೀಕೆರೆ ಪಟ್ಟಣ ಪಂಚಾಯ್ತಿಯು ಹಿಂದೆ ಪುರಸಭ ಆಗಿದ್ದು ನಿಜವೇ?

ಆ) ತರೀಕರೆ ಪಟ್ಟಣ ಪಂಚಾಯ್ತಿಯನ್ನು ಮೇಲ್ದರ್ಜೆಗೆ ಏರಿಸಿ ಪುರಸಭೆಯಾಗಿ ಪರಿವರ್ತಿಸುವ ಪ್ರಸ್ತಾವನ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ ಇದನ್ನು ಯಾವಾಗ ಪುರಸಭೆಯಾಗಿ ಪರಿವರ್ತಿಸಲಾಗುವುದು?

### ಉತ್ತರ

ಅ) ಹೌದು

ಆ) ಹೌದು ಈ ಬಗ್ಗೆ ಪ್ರಾಥಮಿಕ ಅಧಿಸೂಚನೆಯನ್ನು ದಿನಾಂಕ 9-1-2002ರಂದು ಹೊರಡಿಸಲಾಗಿದೆ ಸದರಿ ಪ್ರಸ್ತಾವನೆಗೆ ಇರಬಹುದಾದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ ನಿಗದಿತ ಅವಧಿಯ ಒಳಗಾಗಿ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಅಂತಿಮ ಅಧಿಸೂಚನೆ ಹೊರಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ

ಶ್ರೀ ಬಿ ಆರ್ ನೀಲಕಂಠಪ್ಪ ಮಾನ್ಯ ಅಧ್ಯಕ್ಷರೇ, ಈಗಾಗಲೇ ಸರ್ಕಾರದಿಂದ ಏನು ಅಧಿಸೂಚನೆಯನ್ನು ಹೊರಡಿಸಿದ್ದೀರಿ, ಆ ರೀತಿಯಾಗಿ ಫೆಬ್ರವರಿ 9ನೇ ತಾರೀಖಿನ ನಂತರ ತರೀಕೆರೆ ಪಟ್ಟಣ ಪಂಚಾಯಿತಿಯನ್ನು ಪುರಸಭೆಯಾಗಿ ಪರಿವರ್ತನೆ ಮಾಡಲು ತಾವು ಕಾರ್ಯಕ್ರಮವನ್ನು ರೂಪಿಸುತ್ತೀರಾ ಎಂದು ಕೇಳುತ್ತಿದ್ದೇನೆ

ಶ್ರೀ ಎಂ ಮಲ್ಲಿಕಾರ್ಜುನ ನಾಗಪ್ಪ ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತರೀಕೆರೆ ಪಟ್ಟಣ ಪಂಚಾಯತ್ ಅನ್ನು ಪುರಸಭೆಯನ್ನಾಗಿ ಪರಿವರ್ತನೆ ಮಾಡಬೇಕೆಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ ಇದರ ಬಗ್ಗೆ ಸರ್ಕಾರದ ವತಿಯಿಂದ ಕ್ರಮ ತೆಗೆದುಕೊಂಡಿದ್ದೇವೆ ಇದರ ಬಗ್ಗೆ ಈಗಾಗಲೇ ನೋಟಿಫಿಕೇಷನ್ ಸಹ ಹೊರಡಿಸಿದ್ದೇವೆ ಇದನ್ನು ಮುಂದಿನ ತಿಂಗಳು 9ನೇ ತಾರೀಖಿಗೆ ಮಾಡಬೇಕೆಂದು ಕಾಲಾವಕಾಶವನ್ನು ಇಟ್ಟುಕೊಂಡಿದ್ದೇವೆ ನಾವು ಇದನ್ನು ತಕ್ಷಣ ಮಾಡಿಕೊಡುತ್ತೇವೆಂದು ಹೇಳುತ್ತೇನೆ

ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ ಮಾನ್ಯ ಅಧ್ಯಕ್ಷರೇ ಇದಕ್ಕೆ ಸಂಬಂಧಪಟ್ಟ ಹಾಗೆ ರಾಜ್ಯದಲ್ಲಿ ಇನ್ನೂ ಹಲವಾರು ಪಟ್ಟಣ ಪಂಚಾಯತ್‌ಗಳನ್ನು ಪರಿವರ್ತಿಸುವ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಒಂದು ಪ್ರಸ್ತಾವನೆಯನ್ನು ಈಗಾಗಲೇ ನಾವು ಸರ್ಕಾರಕ್ಕೆ ಕಳುಹಿಸಿದ್ದೇವೆ ಇನ್ನರ ಬಗ್ಗೆಯೂ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಅಧ್ಯಕ್ಷರು ಆ ರೀತಿಯಾಗಿ ಕನ್‌ವರ್ಟ್ ಮಾಡುವಾಗ ಎಲ್ಲಾ ಪಟ್ಟಣ ಪಂಚಾಯಿತಿಗಳನ್ನು ಸೇರಿಸಿ ಮಾಡಿ ಲೀಗಲ್ ಆಗಿ ಇದ್ದರ ಮಾಡಿ

ಚಾಮರಾಜನಗರಕ್ಕೆ ಕಾವೇರಿ ಕುಡಿಯುವ ನೀರು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2(13)

**ಸದಸ್ಯರು ಹೆಸರು ಶ್ರೀ ಎ ಆರ್ ಕೃಷ್ಣಮೂರ್ತಿ(ಸಂತೇಮರಹಳ್ಳಿ)**